# ಪದ್ಯಭಾಗ

## 9. ಸಂಕಲ್ಪ ಗೀತೆ (ಭಾವಗೀತೆ)

**– ಡಾ. ಜಿ. ಎಸ್. ಶಿವರುದ್ರಪ್ಪ**

### ಕವಿ – ಕಾವ್ಯ ಪರಿಚಯ



ಜಿ.ಎಸ್.ಶಿವರುದ್ರಪ್ಪ

ಜಿ.ಎಸ್.ಶಿವರುದ್ರಪ್ಪ ಎಂದೇ ಪ್ರಸಿದ್ಧರಾಗಿರುವ **ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ** ನವರು **ಕ್ರಿ.ಶ.1926**ರಲ್ಲಿ **ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ**ದಲ್ಲಿ ಜನಿಸಿದರು.

ಆಧುನಿಕ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಶಿವರುದ್ರಪ್ಪನವರು **ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದಹೆಜ್ಜೆ, ಅನಾವರಣ. ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

**ಕಾವ್ಯಾರ್ಥಚಿಂತನ** ಕೃತಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಪಡೆದಿರುವ ಶಿವರುದ್ರಪ್ಪ ಅವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ **ನಾಡೋಜ** ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. **ರಾಷ್ಟ್ರಕವಿ** ಅಭಿಧಾನ ಮತ್ತು **ಪಂಪಪ್ರಶಸ್ತಿ**ಗೆ ಪಾತ್ರರಾಗಿದ್ದಾರೆ.

### ಪದ್ಯದ ಆಶಯ ಭಾವ

ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ಧೃಢಸಂಕಲ್ಪವನ್ನು ಹೊಂದಿರಬೇಕು. ಅಂದಕಾರದ ಬದುಕಿಗೆ ಪ್ರೀತಿ ಎಂಬ ಹಣತೆಯನ್ನು ಹಚ್ಚಬೇಕು. ಜೀವನದಲ್ಲಿ ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ಮನುಜರ ನಡುವೆ ಇರುವ ಧರ್ಮ, ಜಾತಿ, ಪಂಗಡ ಇತ್ಯಾದಿ ಭೇದಭಾವಗಳನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲ ವರ್ಧಿಸುತ್ತದೆ. ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ ಎಂಬುದು ಜಿ.ಎಸ್.ಶಿವರುದ್ರಪ್ಪನವರ ಆಶಯವಾಗಿದೆ. ಜಿ.ಎಸ್. ಶಿವರುದ್ರಪ್ಪ ವಿರಚಿತ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ **'ಸಂಕಲ್ಪಗೀತೆ'** ಎಂಬ ಭಾವಗೀತೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**"ಹಿಂದೆ ಗುರುವಿದ್ದ, ಮುಂದೆ ಗುರಿಯಿತ್ತು, ಸಾಗುತ್ತಿತ್ತು ಧೀರರ ದಂಡು"** ಎಂಬ ವಾಕ್ಯ ಹಿಂದಿನ ತಲೆಮಾರಿನ ಯುವಕರಿಗಿದ್ದ ನೆಲೆಯನ್ನು ತಿಳಿಸುತ್ತಿದೆ. ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದಂತೆ. **"ಸ್ವಾತಂತ್ರ್ಯ ನನ್ನ ಆಜನ್ಮಸಿದ್ಧ ಹಕ್ಕು"** ಎಂದ ತಿಲಕರು, ಸ್ವಾತಂತ್ರ್ಯಗಳಿಸುವುದೇ ಜೀವನದ ಏಕೈಕ ಸಂಕಲ್ಪ ಎಂದುಕೊಂಡ ರಾಷ್ಟ್ರಪಿತ ಗಾಂಧೀಜಿ ಸಾಧಕರೆನಿಸಿಕೊಂಡರು. ಇತಿಹಾಸ ದಾಖಲಿಸುವುದು, ನೆನಪಿಸುವುದು ಇಂತಹ ಸಾಧಕರನ್ನು. ಸಾಧಕನು ತಾನು ಕಂಡ ಕನಸನ್ನು ಅದೆಷ್ಟೇ ತೊಡಕುಗಳು ಬಂದರೂ ಅಡ್ಡಿಆತಂಕಗಳು ಎದುರಾದರೂ ನನಸಾಗಿಸುತ್ತಾನೆ. ಹೀಗೆ ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ ಅಸಾಧ್ಯವಾದುದು ಯಾವುದೂ ಇಲ್ಲ. ದೃಢ ಸಂಕಲ್ಪದಿಂದ ಏನೇನನ್ನು ಸಾಧಿಸಬಹುದೆಂಬುದನ್ನು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು **'ಸಂಕಲ್ಪ ಗೀತೆ'** ಎಂಬ ಭಾವಗೀತೆಯಲ್ಲಿ ಸರಳವಾಗಿ, ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ.

### ಪದ್ಯದ ಸಾರಾಂಶ ವಿವರಣೆ



**ಸುತ್ತಲು ಕವಿಯುವ ಕತ್ತಲೆಯೊಳಗೆ**
**ಪ್ರೀತಿಯ ಹಣತೆಯ ಹಚ್ಚೋಣ**
**ಬಿರುಗಾಳಿಗೆ ಹೊಯ್ದಾಡುವ ಹಡಗನು**
**ಎಚ್ಚರದಲಿ ಮುನ್ನಡೆಸೋಣ**



**ಭಾವಾರ್ಥ ಸಹಿತ ಸಾರಾಂಶ:** ಈ ಪದ್ಯದಲ್ಲಿ ಎರಡು ಮುಖ್ಯ ತತ್ವಗಳನ್ನು ನೋಡಬಹುದು ಅವುಗಳೆಂದರೆ :

(1) ಬೆಳಕಿನ ತತ್ವ (2) ಪ್ರೀತಿಯ ತತ್ವ

ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ಧೃಢಸಂಕಲ್ಪವನ್ನು ಹೊಂದಿರಬೇಕು. ಅಂಧಕಾರದ ಬದುಕಿಗೆ ಪ್ರೀತಿ ಎಂಬ ಹಣತೆಯನ್ನು ಹಚ್ಚಬೇಕು. ಜೀವನದಲ್ಲಿ ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ ಎಂಬುದನ್ನು ಕವಿ ಜಿ.ಎಸ್.ಶಿವರುದ್ರನಪ್ಪವರು ಹೇಳುತ್ತಾರೆ.

**"ಸುತ್ತಲು ಕವಿಯುವ ಕತ್ತಲೆಯೊಳಗೆ ಪ್ರೀತಿಯ ಹಣತೆಯ ಹಚ್ಚೋಣ"** ಅಂದರೆ ಇಲ್ಲಿ ಜಾತೀಯತೆ, ಮತ, ಭಾಷೆ, ಬಣ್ಣ, ಅಜ್ಞಾನ, ದ್ವೇಷ, ಅಸೂಯೆ, ಮೂಢನಂಬಿಕೆಗಳೆಂಬ ಕತ್ತಲೆಯು ನಮ್ಮ ಸುತ್ತಲೂ ಕವಿದಿರುತ್ತದೆ, ಇದರಿಂದ ನಾವು ಅಂಧಕಾರದಲ್ಲಿ ಮುಳುಗಿ ನಮ್ಮ ಜೀವನ ದುಸ್ತರವಾಗಿರುತ್ತದೆ. ಆದುದರಿಂದ ಆ ಕತ್ತಲೆಯನ್ನು ಓಡಿಸಲು ಬೆಳಕಿನ (ಅರಿವಿನ) ಅವಶ್ಯಕತೆಯಿದೆ. ಬೆಳಕನ್ನು ಬೀರಲು ಪ್ರೀತಿಯಿಂದ ಹಣತೆಯನ್ನು ಹಚ್ಚಬೇಕಾಗಿದೆ ಎಂದು ಮೊದಲನೆಯ ಬೆಳಕಿನ ತತ್ವವನ್ನು ಸ್ಪಷ್ಟಪಡಿಸಬಹುದು. ಜ್ಞಾನದ ಹಣತೆಯನ್ನು ಹಚ್ಚಿ **"ಬಿರುಗಾಳಿಗೆ ಸಿಕ್ಕು ಹೊಯ್ದಾಡುವಂತಹ ಹಡಗನ್ನು ಎಚ್ಚರಿಕೆಯಿಂದ ಮುಂದೆ ನಡೆಸಿ, ದಡವನ್ನು ಸೇರಿಸೋಣ."** ಅಂದರೆ ಸಂಸಾರ ಸಾಗರದಲ್ಲಿ ಅಜ್ಞಾನದಿಂದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೋ ಸಾಗುತ್ತಿರುವ ಬಾಳನೌಕೆಯನ್ನು ಎಚ್ಚರಿಕೆಯಿಂದ ಗುರಿಯತ್ತ ನಡೆಸೋಣ ಎಂದು ತಮ್ಮ ಎರಡನೆಯ

ಪ್ರೀತಿ ತತ್ವವನ್ನು ಪ್ರತಿಪಾದಿಸಿದ್ದಾರೆ. ಜೀವನದಲ್ಲಿ ಪ್ರೀತಿ ಎಂಬುದು ಬಹಳ ಮುಖ್ಯವಾದದ್ದು. ಯಾರಲ್ಲಿ ಪ್ರೀತಿ ಇರುತ್ತದೆಯೋ ಅಂತವರು ಎಲ್ಲರಿಗೂ ಹಿತವಾಗಿರುತ್ತಾರೆ. ಆದ್ದರಿಂದ ಪರಸ್ಪರವಾಗಿ ವಾತ್ಸಲ್ಯದಿಂದ ಪ್ರೀತಿಸಿ ನಮ್ಮ ಜೀವನವನ್ನು ಉತ್ತಮವಾಗಿ ಸಾಗಿಸಬೇಕೆಂಬ ಮೌಲ್ಯವನ್ನು ಪ್ರತಿಪಾದಿಸಿದ್ದಾರೆ.

**ಕಲುಷಿತವಾದೀ ನದೀ ಜಲಗಳಿಗೆ**
**ಮುಂಗಾರಿನ ಮಳೆಯಾಗೋಣ**
**ಬರಡಾಗಿರವೀ ಕಾಡು ಮೇಡುಗಳ**
**ವಸಂತವಾಗುತ ಮುಟ್ಟೋಣ**

**ಭಾವಾರ್ಥ ಸಹಿತ ಸಾರಾಂಶ :**

ಆಧುನಿಕ ಮಾನವನ ಹಸ್ತಕ್ಷೇಪದಿಂದ ಕಲುಷಿತವಾದ ನದಿಗಳ ಶುದ್ಧೀಕರಣ ಮಾಡಲು ಭೋರ್ಗರೆಯುವ ಮುಂಗಾರಿನ ಮಳೆಯೇ ಬೇಕು. ಅಂದರೆ ಅಲ್ಲಲ್ಲಿ ನಿಂತ ಕಲುಷಿತ ನೀರು, ಕೊಚ್ಚೆಗಳನ್ನು ಕೊಚ್ಚಿ ತೆಗೆದು ಶುದ್ಧೀಕರಿಸಬಹುದು. ಹಾಗೆಯೇ ಕಲ್ಮಷಗಳಿಂದ ಕೂಡಿದ ಮನುಷ್ಯರ ಮನಸ್ಸುಗಳನ್ನು ಪ್ರೀತಿಯ ಮೂಲಕ ಹಸನಗೊಳಿಸೋಣ ಎಂಬ ನಿಷ್ಕಲ್ಮಷ ಭಾವನೆಗಳು ಬೇಕು ಎಂಬುದನ್ನು ಅಭಿವ್ಯಕ್ತಪಡಿಸಿದ್ದಾರೆ. **'ಬರಡಾಗಿರವಿ ಕಾಡು ಮೇಡುಗಳ ವಸಂತವಾಗುತ ಮುಟ್ಟೋಣ'** ಅಂದರೆ ಆಧುನೀಕರಣ, ಜಾಗತೀಕರಣ, ಕೈಗಾರೀಕರಣ, ಡಾಂಬರೀಕರಣ, ಯಾಂತ್ರೀಕರಣಗಳಿಂದಾಗಿ ಕಾಡುಗಳು ನಾಶವಾಗಿ ಹಾಳುಬಿದ್ದಿರುವ ಪರಿಸರ ಬರಡಾದ ಮರುಭೂಮಿಯಂತಾಗಿದೆ. ಅಲ್ಲಿ ಗಿಡಮರಗಳನ್ನು ಬೆಳೆಸುತ್ತ, ಬೆಳೆಸುವ ಅವಶ್ಯಕತೆಯನ್ನು ಜನರಲ್ಲಿ ಜಾಗೃತಗೊಳಿಸುವ ಕಾರ್ಯವನ್ನು ಮಾಡೋಣ ಎನ್ನಬಹುದು. ಅಂದರೆ ನಾಗರೀಕತೆಯ ಬರಾಟೆಯಲ್ಲಿ ಮೌಲ್ಯಗಳು ಕುಸಿಯುತ್ತಿವೆ, ಅಂತಹ ಹೃದಯದಲ್ಲಿ ಮೌಲ್ಯಗಳೆಂಬ ಸಸಿಗಳನ್ನು ನೆಟ್ಟು, ಪ್ರೀತಿಯ ನೀರನ್ನು ಎರೆಯುತ್ತ ಬದುಕನ್ನು ಸಮೃದ್ಧವಾಗಿಸೋಣ ಎಂದು ಬದುಕು ಹಸನುಗೊಳಿಸುವ ಮೌಲ್ಯವನ್ನು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ.

**ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ**
**ಹೊಸ ಭರವಸೆಗಳ ಕಟ್ಟೋಣ**
**ಮನುಜರ ನಡುವಣ ಅಡ್ಡಗೋಡೆಗಳ**
**ಕೆಡವುತ ಸೇತುವೆಯಾಗೋಣ.**

**ಭಾವಾರ್ಥ ಸಹಿತ ಸಾರಾಂಶ:** ಇಂದಿನ ದಿನಮಾನದಲ್ಲಿ ಸಾಕಷ್ಟು ಮನುಷ್ಯರಲ್ಲಿ ಮೌಲ್ಯಗಳು ಕುಸಿದು ಹೋಗಿವೆ. ಮೌಲ್ಯಯುತ ಬದುಕು ಕಾಣದಾಗಿದೆ. ಆದ್ದರಿಂದ ಕುಸಿದು ಹೋಗಿರುವ ಮೌಲ್ಯಗಳನ್ನು ಮತ್ತೆ ಎಬ್ಬಿಸಿ ನಿಲ್ಲಿಸಬೇಕು. ಬಡತನ, ಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು ಆಸರೆ ನೀಡಿ ಮೇಲೆ ತರಬೇಕು. ಅವರ ಮನಸ್ಸಿನಲ್ಲಿ ಪರಸ್ಪರ ಹೊಂದಾಣಿಕೆಯಿಂದ ಬದುಕುವ, ನಾವೆಲ್ಲರೂ ಒಂದೇ ಎಂಬ ಭಾವನೆಗಳು ಮೂಡುವಂತೆ ಹೊಸ ಭರವಸೆಗಳನ್ನು ಕಟ್ಟಿ ಕೊಡಬೇಕು. ಹಾಗೆಯೇ ಪ್ರಸ್ತುತ ದಿನಗಳಲ್ಲಿ ಧರ್ಮಾಂಧತೆ, ಜಾತಿಯತೆಯಿಂದ ಸಹಬಾಳ್ವೆ ವಿಘಟನೆಯಾಗುತ್ತಿದೆ. ಮನುಜರ ನಡುವೆ ಇರುವ ಧರ್ಮ, ಜಾತಿ, ಪಂಗಡ ಇತ್ಯಾದಿ ಭೇದಭಾವಗಳನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲ ವರ್ಧಿಸುತ್ತದೆ. ಆದ್ದರಿಂದ ಮನುಷ್ಯರ ನಡುವೆ ಜಾತಿ, ಧರ್ಮ, ಭಾಷೆ, ವರ್ಣಗಳಿಂದ ಆವೃತವಾದ ಅಡ್ಡಗೋಡೆಗಳನ್ನು ಕೆಡವಿಹಾಕಬೇಕು. ಸಂಕುಚಿತ ಮನೋಭಾವನೆಗಳನ್ನು ಬಿಡಬೇಕು. ಭೇದಭಾವಗಳನ್ನು ಹೋಗಲಾಡಿಸಿ ವಿಶ್ವದ ಜನರೆಲ್ಲರನ್ನು ಒಂದಾಗಿಸುವ ಪ್ರೀತಿಯ, ಸ್ನೇಹದ ಸೇತುವೆಯನ್ನು ನಿರ್ಮಿಸೋಣವೆಂದು ವಿಶ್ವಕುಟುಂಬದ ಪರಿಕಲ್ಪನೆಯನ್ನು, ಸಮಾನತೆಯ ಮೌಲ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ.

**ಮತಗಳೆಲ್ಲವೂ ಪಥಗಳು ಎನ್ನುವ**
**ಹೊಸ ಎಚ್ಚರದೊಳು ಬದುಕೋಣ**
**ಭಯ ಸಂಶಯದೊಳು ಕಂದಿದ ಕಣ್ಣೊಳು**
**ನಾಳಿನ ಕನಸನು ಬಿತ್ತೋಣ.**

**ಭಾವಾರ್ಥ ಸಹಿತ ಸಾರಾಂಶ:** ಭಾರತದಲ್ಲಿ ವಿವಿಧ ಮತಪಂಥಗಳಿದ್ದು ಬೇರೆಬೇರೆ ರೀತಿಯ ಆಚರಣೆ, ಸಂಪ್ರದಾಯಗಳು ಇವೆ. ಆದರೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶ ಭಾರತ. ಇಂತಹ ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿಯಬೇಕು. ಅಸಮಾನತೆ, ಭಯೋತ್ಪಾದಕತೆ, ಶೋಷಣೆ ಇತ್ಯಾದಿಗಳಿಂದ ಭಯ-ಭೀತಿಗೊಂಡು, ನಾಳಿನ ಬದುಕಿನ ಬಗ್ಗೆ ಸಂಶಯಗೊಂಡು, ಮಸುಕಾದ ಕಣ್ಣುಗಳಿಗೆ ನಿರಾಸೆ ಹೊಂದಿದ ಮನಸ್ಸುಗಳಿಗೆ ಮುಂದಿನ ಬದುಕಿಗೆ, ಉತ್ತಮ ಕನಸನ್ನು ಅವರಲ್ಲಿ ಭಿತ್ತಿ, ಧೈರ್ಯ ನೀಡಬೇಕೆಂದು, ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ ಎಂದು ಸಮಾನತೆಯ ತತ್ವ ಮತ್ತು ಒಳ್ಳೆ ಬದುಕಿನ ಭರವಸೆಯ ಬಗ್ಗೆ ಜಿ.ಎಸ್.ಶಿವರುದ್ರಪ್ಪನವರು ಅರಿವು ಮೂಡಿಸಿದ್ದಾರೆ.

## ಅಭ್ಯಾಸ ಪ್ರಶ್ನೋತ್ತರಗಳು

### ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.

**1. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?**

**ಉತ್ತರ:** ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲಿ ಮುನ್ನಡೆಸಬೇಕು.

**2. ನದೀಜಲಗಳು ಏನಾಗಿವೆ?**

**ಉತ್ತರ:** ನದಿಜಲಗಳು ಕಲುಷಿತವಾಗಿದೆ.

**3. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?**

**ಉತ್ತರ: ಕಲುಷಿತವಾಗಿರುವ ನದೀಜಲಗಳಿಗೆ** ಮುಂಗಾರಿನ ಮಳೆಯಾಗಬೇಕು.

**4. ಕಾಡುಮೇಡುಗಳ ಸ್ಥಿತಿ ಹೇಗಿದೆ?**
**ಉತ್ತರ:** ಕಾಡುಮೇಡುಗಳ ಸ್ಥಿತಿ **ಬರಡಾಗಿದೆ.**
**5. ಯಾವ ಎಚ್ಚರದೊಳು ಬದುಕಬೇಕಿದೆ?**
**ಉತ್ತರ: ಮತಗಳೆಲ್ಲವೂ ಪಥಗಳು** ಎನ್ನುವ ಹೊಸ ಎಚ್ಚರದೊಳು ಬದುಕಬೇಕಿದೆ.

**ಹೆಚ್ಚುವರಿ ಪ್ರಶ್ನೋತ್ತರಗಳು**

**6. ಸುತ್ತಲು ಕವಿಯುವ ಕತ್ತಲೆಯೊಳಗೆ ಎಂತಹ ಹಣತೆಯನ್ನು ಹಚ್ಚಬೇಕು?**
**ಉತ್ತರ:** ಸುತ್ತಲು ಕವಿಯುವ ಕತ್ತಲೆಯೊಳಗೆ **ಪ್ರೀತಿಯ ಹಣತೆ**ಯನ್ನು ಹಚ್ಚಬೇಕು.
**7. ಕವಿ ಯಾವುದನ್ನು ಕೆಡವುತ ಸೇತುವೆಯಾಗಬೇಕೆಂದು ಹೇಳಿದ್ದಾರೆ?**
**ಉತ್ತರ:** ಮನುಜರ ನಡುವಿನ ಅಡ್ಡಗೋಡೆಗಳನ್ನು ಕೆಡವುತ ಸೇತುವೆಯಾಗಬೇಕೆಂದಿದ್ದಾರೆ.
**8. ಬರಡಾಗಿರುವ ಕಾಡುಮೇಡುಗಳಿಗೆ ಏನಾಗಬೇಕೆಂದು ಕವಿ ಹೇಳಿದ್ದಾರೆ?**
**ಉತ್ತರ:** ಬರಡಾಗಿರುವ ಕಾಡುಮೇಡುಗಳಿಗೆ **ವಸಂತ**ವಾಗಬೇಕೆಂದು ಕವಿ ಹೇಳಿದ್ದಾರೆ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?**
**ಉತ್ತರ:** ನಮ್ಮ ಜೀವನವೆಂಬ ಹಡಗಿನ ಸುತ್ತಮುತ್ತಲು ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿಯೆಂಬ ಅರಿವಿನ (ತಿಳುವಳಿಕೆಯ) ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಅಜ್ಞಾನದಿಂದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೋ ಸಾಗುತ್ತಿರುವ ಬಾಳನೌಕೆಯನ್ನು ಜ್ಞಾನವೆಂಬ ಹಣತೆಯ ಮೂಲಕ ಎಚ್ಚರಿಕೆಯಿಂದ ಗುರಿಯತ್ತ ಮುನ್ನಡೆಸಬೇಕಿದೆ.

**2. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?**
**ಉತ್ತರ:** ಮುಂಗಾರಿನ ಮಳೆಯಾದಾಗ ಪ್ರಕೃತಿ ಹಚ್ಚಹಸಿರಿನಿಂದ ಕಂಗೊಳಿಸುತ್ತದೆ. ವಸಂತನಕಾಲದ ಆಗಮನ ಬರಡಾಗಿರುವ ಕಾಡು–ಮೇಡುಗಳಲ್ಲಿ ಮರಗಿಡಗಳು ಸಮೃದ್ಧವಾಗಿ ಚಿಗುರಿ ಪ್ರಕೃತಿಗೆ ನವಚೈತನ್ಯದ ರೀತಿಯಲ್ಲಿ ಮುಟ್ಟಬೇಕಾಗಿದೆ.

**3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?**
**ಉತ್ತರ:** ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ಭರವಸೆಗಳನ್ನು ಮೂಡಿಸಬೇಕು. ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವುಗಳನ್ನು ಕೆಡವಬೇಕು. ಮನುಜ ಮನುಜರ ನಡುವೆ ಪ್ರೀತಿ, ಸ್ನೇಹ, ವಿಶ್ವಾಸದ ಸೇತುವೆಯಾಗಬೇಕಿದೆ.

**4. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**
**ಉತ್ತರ:** ನಾಳಿನ ಕನಸನ್ನು ಬಿತ್ತಬೇಕಾದರೆ ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ, ಕನಸ್ಸನ್ನು ಬಿತ್ತುತ್ತ ಬದುಕು ನಡೆಸಬೇಕು.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**1. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?**
**ಉತ್ತರ:** ನಮ್ಮ ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ನಮ್ಮ ಜೀವನವೆಂಬ ಹಡಗಿನ ಸುತ್ತಮುತ್ತಲು ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿಯೆಂಬ ಅರಿವಿನ (ತಿಳುವಳಿಕೆಯ) ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಅಜ್ಞಾನದಿಂದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೋ ಸಾಗುತ್ತಿರುವ ಬಾಳನೌಕೆಯನ್ನು ಜ್ಞಾನವೆಂಬ ಹಣತೆಯ ಮೂಲಕ ಎಚ್ಚರಿಕೆಯಿಂದ ಗುರಿಯತ್ತ ಮುನ್ನಡೆಸುವ ಸಂಕಲ್ಪಕೈಗೊಳ್ಳಬೇಕು.

ವಸಂತಕಾಲದ ಆಗಮನ ಬರಡಾಗಿರುವ ಕಾಡು–ಮೇಡುಗಳಲ್ಲಿ ಮರಗಿಡಗಳು ಸಮೃದ್ಧವಾಗಿ ಚಿಗುರಿ ಪ್ರಕೃತಿಗೆ ನವಚೈತನ್ಯವನ್ನು ತಂದುಕೊಡುವ ಹಾಗೆಯೇ ಕಲುಷಿತವಾಗಿರುವ ಮನಸ್ಸುಗಳನ್ನು ಹಸನುಗೊಳಿಸಬೇಕು. ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ಭರವಸೆಗಳನ್ನು ಮೂಡಿಸಬೇಕು. ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವುಗಳನ್ನು ಕೆಡವಿ, ಮನುಜ ಮನುಜರ ನಡುವೆ ಪ್ರೀತಿ, ಸ್ನೇಹ, ವಿಶ್ವಾಸದ ಸೇತುವೆಯಾಗುವ ಸಂಕಲ್ಪ ಕೈಗೊಳ್ಳಬೇಕು.

ಮತಪಂಥಗಳೆಲ್ಲವೂ ಸಾಧನೆಯ ದಾರಿಗಳು, ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ಸಮಾಜವನ್ನು ಸ್ವಾಸ್ಥ್ಯದ ನೆಲೆಯಾಗಿಸುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.

**2. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.**
**ಉತ್ತರ:** ಜಾತೀಯತೆ, ಮತ, ಭಾಷೆ, ಬಣ್ಣ, ಅಜ್ಞಾನ, ಮೂಢನಂಬಿಕೆಗಳೆಂಬ ಕತ್ತಲೆಯು ನಮ್ಮ ಸುತ್ತಲೂ ಕವಿದಿರುತ್ತದೆ, ಆ ಕತ್ತಲೆಯನ್ನು ಓಡಿಸಲು ಪ್ರೀತಿಯೆಂಬ ಅರಿವಿನ ಹಣತೆಯನ್ನು ಹಚ್ಚಬೇಕಾಗಿದೆ. ಅಜ್ಞಾನದಿಂದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೋ ಸಾಗುತ್ತಿರುವ ಬಾಳನೌಕೆಯನ್ನು ಎಚ್ಚರಿಕೆಯಿಂದ ಗುರಿಯತ್ತ ನಡೆಸುವ ಸಂಕಲ್ಪದ ಅನುಷ್ಠಾನವಾಗಬೇಕು. ಆಧುನಿಕ ಮಾನವನ ಹಸ್ತಕ್ಷೇಪದಿಂದ ಕಲುಷಿತವಾದ

ನದಿಗಳ ಶುದ್ಧೀಕರಣ ಮಾಡಲು ಭೋರ್ಗರೆಯುವ ಮುಂಗಾರಿನ ಮಳೆಯೇ ಬೇಕು. ಹಾಗೆಯೇ ಕಲ್ಮಷಗಳಿಂದ ಕೂಡಿದ ಮನುಷ್ಯರ ಮನಸ್ಸುಗಳನ್ನು ಪ್ರೀತಿಯ ಮೂಲಕ ಹಸನಗೊಳಿಸುವ ಸಂಕಲ್ಪ ಬೇಕು. ನಾಗರೀಕತೆಯ ಬರಾಟೆಯಲ್ಲಿ ಮೌಲ್ಯಗಳು ಕುಸಿಯುತ್ತಿವೆ. ಆದ್ದರಿಂದ ಮೌಲ್ಯಗಳೆಂಬ ಸಸಿಗಳನ್ನು ನೆಟ್ಟು, ಪ್ರೀತಿಯ ನೀರನ್ನು ಎರೆಯುತ್ತ ಬದುಕನ್ನು ಸಮೃದ್ಧವಾಗಿಸುವ ಸಂಕಲ್ಪದ ಅನುಷ್ಠಾನವಾಗಬೇಕು. ಬಡತನ, ಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ಭರವಸೆಗಳನ್ನು ಕಟ್ಟಿ ಕೊಡಬೇಕು. ಹಾಗೆಯೇ ಮನುಷ್ಯರ ನಡುವೆ ಜಾತಿ, ಧರ್ಮ, ಭಾಷೆ, ವರ್ಣಗಳಿಂದ ಆವೃತವಾದ ಅಡ್ಡಗೋಡೆಗಳನ್ನು ಕೆಡವಿ ಎಲ್ಲರನ್ನು ಒಂದಾಗಿಸುವ ಪ್ರೀತಿಯ, ಸ್ನೇಹದ ಸೇತುವೆಯನ್ನು ನಿರ್ಮಿಸುವ ಸಂಕಲ್ಪವನ್ನು ಅನುಷ್ಠಾನಗೊಳಿಸಬೇಕು. ಮತಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ದಾರಿದೀಪಗಳು ಎಂಬುದನ್ನು ಅನುಷ್ಠಾನಗೊಳಿಸಬೇಕು. ಅಸಮಾನತೆ, ಶೋಷಣೆ ಇತ್ಯಾದಿಗಳಿಂದ ಭಯ-ಭೀತಿಗೊಂಡು, ನಾಳಿನ ಬದುಕಿನ ಬಗ್ಗೆ ಸಂಶಯಗೊಂಡು, ಮಸುಕಾದ ಕಣ್ಣುಗಳಿಗೆ ಉತ್ತಮ ಕನಸನ್ನು ಅವರಲ್ಲಿ ಬಿತ್ತಿ, ಧೈರ್ಯ ನೀಡುವ ಸಂಕಲ್ಪಗಳು ಅನುಷ್ಠಾನಗೊಂಡಾಗ ನಮ್ಮ ಸಮಾಜ ಸ್ವಾಸ್ಥ್ಯವಾಗಿರುತ್ತದೆ ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ಪ್ರೀತಿಯ ಹಣತೆಯ ಹಚ್ಚೋಣ."**

**ಆಯ್ಕೆ:–** ಈ ವಾಕ್ಯವನ್ನು ಕವಿ **'ಜಿ.ಎಸ್. ಶಿವರುದ್ರಪ್ಪ'** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ನಮ್ಮ ಜೀವನದಲ್ಲಿ ಎಂತಹ ಹಣತೆಯನ್ನು ಹಚ್ಚಬೇಕು ಎಂಬ ಭಾವಮೂಡಿದಾಗ ಕವಿ ಜಿ.ಎಸ್. ಶಿವರುದ್ರಪ್ಪನವರು ಜಾತೀಯತೆ, ಮತ, ಭಾಷೆ, ಬಣ್ಣ, ಅಜ್ಞಾನ, ಅಂಧಕಾರ, ಮೂಢನಂಬಿಕೆಗಳೆಂಬ ಕತ್ತಲೆಯನ್ನು ಓಡಿಸಲು **ಪ್ರೀತಿಯೆಂಬ ಅರಿವಿನ ಹಣತೆ**ಯನ್ನು ಹಚ್ಚಬೇಕಾಗಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ನಮ್ಮ ಜೀವನದಲ್ಲಿ ಅಜ್ಞಾನ, ಅಂದಕಾರವನ್ನು ಹೋಗಲಾಡಿಸಲು ಪ್ರೀತಿಯೆಂಬ ಅರಿವಿನ ದೀಪವನ್ನು ಬೆಳಗಿಸುವ ಸಂಕಲ್ಪ ಮಾಡಬೇಕೆಂಬ ತಮ್ಮ ಭಾವನೆಯನ್ನು ಕವಿ ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸುತ್ತಾರೆ.

**2. "ಮುಂಗಾರಿನ ಮಳೆಯಾಗೋಣ."**

**ಆಯ್ಕೆ:–** ಈ ವಾಕ್ಯವನ್ನು ಕವಿ **'ಜಿ.ಎಸ್. ಶಿವರುದ್ರಪ್ಪ'** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಮಾನವರ ದುರ್ವರ್ತನೆಯಿಂದ ಕಲುಷಿತವಾಗಿರುವ ನದೀಜಲಗಳ ಶುದ್ಧೀಕರಣ ಹೇಗಾಗಬೇಕೆಂಬ ಭಾವ ಕವಿಯ ಮನದಲ್ಲಿ ಮೂಡಿದಾಗ **ಮುಂಗಾರಿನ ಮಳೆಯಾಗಿ ಕಲ್ಮಶಗಳು ಕೊಚ್ಚಿಕೊಂಡು ಹೋಗಬೇಕು,** ಬರಡಾಗಿರುವ ಕಾಡು–ಮೇಡುಗಳಿಗೆ ವಸಂತವಾಗಬೇಕೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ಮುಂಗಾರಿನ ಮಳೆ ಕಲ್ಮಶಗಳನ್ನು ಕೊಚ್ಚಿಕೊಂಡು ಹೋದಂತೆ, ಹೊಸ ಸಂಕಲ್ಪ ಜನರ ಮನದ ಕಲ್ಮಶಗಳನ್ನು ಕಳೆದು ಬದುಕನ್ನು ಸಮೃದ್ಧವಾಗಿಸಬೇಕು ಎಂದು ಕವಿ ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**3. "ಹೊಸ ಭರವಸೆಗಳ ಕಟ್ಟೋಣ."**

**ಆಯ್ಕೆ:–** ಈ ವಾಕ್ಯವನ್ನು ಕವಿ **'ಜಿ.ಎಸ್. ಶಿವರುದ್ರಪ್ಪ'** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಕುಸಿದು ಹೋಗಿರುವ ಮೌಲ್ಯಗಳನ್ನು ಮತ್ತೆ ಎಬ್ಬಿಸಿ ನಿಲ್ಲಿಸಬೇಕು. ಬಡತನ, ಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು **ಹೊಸ ಭರವಸೆಗಳನ್ನು ಕಟ್ಟಿ ಕೊಡಬೇಕು** ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ಮೌಲ್ಯಗಳನ್ನು ಪುನರ್ ಸ್ಥಾಪಿಸುವ, ಹಾಗೂ ಶೋಷಿತರ ಬದುಕಿಗೆ ಭರವಸೆ ತುಂಬುವ ಸಂಕಲ್ಪ ಬೇಕು ಎಂಬುದನ್ನು ಕವಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸುತ್ತಾರೆ.

**4. "ಹೊಸ ಎಚ್ಚರದೊಳು ಬದುಕೋಣ."**

**ಆಯ್ಕೆ:–** ಈ ವಾಕ್ಯವನ್ನು ಕವಿ **'ಜಿ.ಎಸ್. ಶಿವರುದ್ರಪ್ಪ'** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಬೇರೆ ಬೇರೆ ಮತಗಳ ನಡುವಿನ ಸಂಘರ್ಷಗಳ ಪರಿಣಾಮದ ಬಗ್ಗೆ ಕವಿಯ ಮನೋಭಾವ ದಲ್ಲಿ ಮೂಡಿದಾಗ ಅದಕ್ಕೆ ಪರಿಹಾರೋತ್ತರವಾಗಿ ಮತಗಳೆಲ್ಲವೂ ಸಾಧನೆಯ ದಾರಿಗಳು, ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿದು **ಎಚ್ಚರಿಕೆಯಲ್ಲಿ ನಾವು ಬದುಕಬೇಕು** ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಸಮಾಜದಲ್ಲಿ ಶಾಂತಿ ಮತ್ತು ಐಕ್ಯತೆ ನೆಲೆಸಲು ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕಬೇಕೆಂಬ ಮೌಲ್ಯವನ್ನು ಕವಿ ಈ ವಾಕ್ಯದಲ್ಲಿ ಎತ್ತಿ ಹಿಡಿದಿದ್ದಾರೆ.

**ಉ) ಬಿಟ್ಟ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. 'ಸಂಕಲ್ಪ ಗೀತೆ ಪದ್ಯವನ್ನು **ಎದೆತುಂಬಿ ಹಾಡಿದೆನು** ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.
2. ಕತ್ತಲೆಯೊಳಗೆ ಪ್ರೀತಿಯ **ಹಣತೆಯ** ಹಚ್ಚೋಣ.
3. ಜಿ.ಎಸ್. ಶಿವರುದ್ರಪ್ಪನವರು **ದಾವಣಗೆರೆ** ಯಲ್ಲಿ ಸಮಾವೇಶಗೊಂಡ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.
4. ಮತಗಳೆಲ್ಲವೂ **ಪಥಗಳು** ಎನ್ನುವ ಹೊಸ ಎಚ್ಚರದೊಳು ಬದುಕೋಣ.
5. ಮನುಜರ ನಡುವಣ **ಅಡ್ಡಗೋಡೆಗಳ** ಕೆಡವುತ ಸೇತುವೆಯಾಗೋಣ.

## ಭಾಷಾ ಚಟುವಟಿಕೆ

**1. ಕೊಟ್ಟಿರುವ ಪದಗಳ ಧಾತುಗಳನ್ನು ಗುರುತಿಸಿ ಬರೆಯಿರಿ.**

ನಿಲ್ಲಿಸು, ನಡೆಸು, ಹಚ್ಚುವುದು, ಮುಟ್ಟೋಣ, ಕಟ್ಟುವುದು, ಆಗೋಣ.

| | | |
|---|---|---|
| ನಿಲ್ಲಿಸು– **ನಿಲ್ಲು** | ನಡೆಸು – **ನಡೆ** | ಹಚ್ಚುವುದು – **ಹಚ್ಚು** |
| ಮುಟ್ಟೋಣ – **ಮುಟ್ಟು** | ಕಟ್ಟುವುದು – **ಕಟ್ಟು** | ಆಗೋಣ – **ಆಗು** |

**2. ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆಯಿರಿ.**

ಪ್ರೀತಿಯ, ಬಿರುಗಾಳಿಗೆ, ಜಲಕ್ಕೆ, ಬಿದ್ದುದನ್ನು, ಭರವಸೆಗಳ.

| ಪದಗಳು | ವಿಭಕ್ತಿ ಪ್ರತ್ಯಯ | ವಿಭಕ್ತಿ ಹೆಸರು | ಪದಗಳು | ವಿಭಕ್ತಿ ಪ್ರತ್ಯಯ | ವಿಭಕ್ತಿ ಹೆಸರು |
|---|---|---|---|---|---|
| **ಪ್ರೀತಿಯ** | ಅ | ಷಷ್ಠಿ | **ಬಿದ್ದುದನ್ನು** | ಅನ್ನು | ದ್ವಿತೀಯ |
| **ಬಿರುಗಾಳಿಗೆ** | ಗೆ | ಚತುರ್ಥಿ | **ಭರವಸೆಗಳ** | ಅ | ಷಷ್ಠಿ |
| **ಜಲಕ್ಕೆ** | ಕ್ಕೆ | ಚತುರ್ಥಿ | | | |

**3. ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿಯನ್ನು ಹೆಸರಿಸಿ.**

ಸಂಶಯದೊಳ್, ಜಲದಿಂ, ಮರದತ್ತಣಿಂ, ರಾಯಂಗೆ.

| ಪದಗಳು | ವಿಭಕ್ತಿ ಪ್ರತ್ಯಯ | ವಿಭಕ್ತಿ ಹೆಸರು | ಪದಗಳು | ವಿಭಕ್ತಿ ಪ್ರತ್ಯಯ | ವಿಭಕ್ತಿ ಹೆಸರು |
|---|---|---|---|---|---|
| **ಸಂಶಯದೊಳ್** | ಒಳ್ | ಸಪ್ತಮಿ | **ಮರದತ್ತಣಿಂ** | ಅತ್ತಣಿಂ | ಪಂಚಮಿ |
| **ಜಲದಿಂ** | ಇಂ | ತೃತೀಯ | **ರಾಯಂಗೆ** | ಗೆ | ಚತುರ್ಥಿ |

**4. ಕೊಟ್ಟಿರುವ ಧಾತುಗಳಿಗೆ ವಿಧ್ಯರ್ಥಕ, ನಿಷೇಧಾರ್ಥಕ ಮತ್ತು ಸಂಭಾವನಾರ್ಥಕ ರೂಪಗಳನ್ನು ಬರೆಯಿರಿ.**

ಹಾಡು, ನೋಡು, ಕಟ್ಟು, ಕೇಳು, ಓಡು, ಓದು, ಬರೆ.

| ಧಾತು | ವಿಧ್ಯರ್ಥಕ ರೂಪ | ನಿಷೇಧಾರ್ಥಕ ರೂಪ | ಸಂಭಾವನಾರ್ಥಕ ರೂಪ |
|---|---|---|---|
| ಹಾಡು | ಹಾಡಲಿ/ಹಾಡಿರಿ | ಹಾಡನು/ಹಾಡಳು/ಹಾಡರು/ಹಾಡದು | ಹಾಡಿಯಾನು/ಹಾಡಿಯಾರು/ಹಾಡೀತು |
| ನೋಡು | ನೋಡಲಿ/ನೋಡಿರಿ | ನೋಡನು/ನೋಡಳು /ನೋಡರು/ನೋಡದು | ನೋಡಿಯಾನು/ನೋಡಿಯಾಳು/ ನೋಡಿಯಾರು/ನೋಡೀತು |
| ಕಟ್ಟು | ಕಟ್ಟಲಿ/ಕಟ್ಟಿರಿ | ಕಟ್ಟನು/ಕಟ್ಟಳು/ಕಟ್ಟರು/ಕಟ್ಟದು | ಕಟ್ಟಿಯಾನು/ಕಟ್ಟಿಯಾಳು/ಕಟ್ಟಿಯಾರು/ಕಟ್ಟೀತು |
| ಕೇಳು | ಕೇಳಲಿ/ಕೇಳಿರಿ | ಕೇಳನು/ಕೇಳಳು/ಕೇಳರು/ಕೇಳದು | ಕೇಳಿಯಾನು/ಕೇಳಿಯಾಳು/ಕೇಳಿಯಾರು/ಕೇಳೀತು |
| ಓಡು | ಓಡಲಿ/ಓಡಿರಿ | ಓಡನು/ಓಡಳು/ಓಡರು/ಓಡದು | ಓಡಿಯಾನು/ಓಡಿಯಾಳು/ಓಡಿಯಾರು/ಓಡೀತು |
| ಓದು | ಓದಲಿ/ಓದಿರಿ | ಓದನು/ಓದಳು/ಓದರು/ಓದದು | ಓದಿಯಾನು/ಓದಿಯಾಳು/ಓದಿಯಾರು/ ಓದಿತು |
| ಬರೆ | ಬರೆಯಲಿ/ಬರೆಯಿರಿ | ಬರೆಯನು/ಬರೆಯಳು/ಬರೆಯರು/ ಬರೆಯದು | ಬರೆದಾನು/ಬರೆದಾಳು/ಬರೆದಾರು/ ಬರೆದೀತು |

**5. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ**

**ಕಲುಷಿತವಾದೀ** ನದೀ ಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರವೀ ಕಾಡು ಮೇಡುಗಳ
ವಸಂತವಾಗುತ **ಮುಟ್ಟೋಣ**

**ಮತಗಳೆಲ್ಲವೂ** ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು **ಬಿತ್ತೋಣ.**